(ಸಾಕ್ಷಿಗೆ ದಿನಾಂಕ: 24.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಆರ್.ಜೆ., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ಮಧ್ಯಂತರ ಅರ್ಜಿಯೊಂದಿಗೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ನಾಲ್ಕು ಹಕ್ಕು ಬದಲಾವಣೆಗಳನ್ನು ಅನುಕ್ರಮವಾಗಿ ನಿ.ಪಿ.1 ರಿಂದ ನಿ.ಪಿ.4 ಎಂದು, ಮೂರು ಪಹಣಿಗಳನ್ನು ಅನುಕ್ರಮವಾಗಿ ನಿ.ಪಿ.5 ರಿಂದ ನಿ.ಪಿ.7 ಎಂದು ಗುರುತಿಸಲಾಯಿತು.

ದಿನಾಂಕಃ 08.09.1993ರ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದೇನೆ. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮೂಲ ಕ್ರಯಪತ್ರವನ್ನು ಹಾಜರುಪಡಿಸದ ಕಾರಣ ಸಾಕ್ಷಿ ಹಾಜರುಪಡಿಸಿದ ಕ್ರಯಪತ್ರವನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂಬ ತಕರಾರನ್ನು ಮಾಡಿದ್ದು, ಸದರಿ ತಕರಾರಿಗೆ ಒಳಪಟ್ಟು ಸಾಕ್ಷಿ ಹಾಜರುಪಡಿಸಿದ ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ.8 ಎಂದು ಗುರುತಿಸಲಾಯಿತು.

ಮತ್ತೊಂದು ಹಕ್ಕು ಬದಲಾವಣೆ ವಹಿಯ ದೃಢೀಕೃತ ನಕಲನ್ನು ನಿ.ಪಿ.9 ಎಂದು, 17 ಪಹಣಿ ಪತ್ರಿಕೆಗಳನ್ನು ಅನುಕ್ರಮವಾಗಿ ನಿ.ಪಿ.10 ರಿಂದ ನಿ.ಪಿ.26 ಎಂದು, ಮತ್ತೊಂದು ಹಕ್ಕು ಬದಲಾವಣೆ ವಹಿಯನ್ನು ನಿ.ಪಿ.27 ಎಂದು, ಮೂರು ಪಹಣಿಗಳನ್ನು ಅನುಕ್ರಮವಾಗಿ ನಿ.ಪಿ.28 ರಿಂದ ನಿ.ಪಿ.30 ಎಂದು, ಆರ್.ಆರ್.ಟಿ(ಅ) (ಕು) 21/2015-16ರಲ್ಲಿ ತುಮಕೂರು ಉಪವಿಭಾಗಾಧಿಕಾರಿಗಳು ದಿನಾಂಕಃ 18.07.2016ರಂದು ಹೊರಡಿಸಿದ ಆದೇಶದ ಯಥಾ ನಕಲನ್ನು ನಿ.ಪಿ.31 ಎಂದು, ಎರಡು ಪಹಣಿಗಳನ್ನು ಅನುಕ್ರಮವಾಗಿ ನಿ.ಪಿ.32 ಮತ್ತು ನಿ.ಪಿ.33 ಎಂದು, ತಹಸೀಲ್ದಾರ್, ಕುಣಿಗಲ್ ಇವರು ದಿನಾಂಕಃ 12.06.2019ರಂದು ತುಮಕೂರು ಜಿಲ್ಲಾಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ನಿ.ಪಿ.34 ಎಂದು, ದಿನಾಂಕಃ 15.03.2019ರಂದು ಪ್ರತಿವಾದಿ ಕುಣಿಗಲ್ ತಹಸೀಲ್ದಾರ್ ರವರಿಗೆ ನೀಡಿದ ತಕರಾರು ಅರ್ಜಿಯನ್ನು ನಿ.ಪಿ.35 ಎಂದು, ಹದ್ದುಬಸ್ತು ನಕ್ಷೆಯ ಪ್ರತಿಯನ್ನು ನಿ.ಪಿ.36 ಎಂದು, ಪ್ರಧಾನ ಸಿವಿಲ್ ನ್ಯಾಯಾಲಯದ ಮೂಲ ದಾವೆ ಸಂಖ್ಯೆ 395/2016ರಲ್ಲಿನ ಪ್ರತಿವಾದಿಯ ಸಾಕ್ಷ್ಯದ ದೃಢೀಕೃತ ನಕಲನ್ನು ನಿ.ಪಿ.37 ಎಂದು ಗುರುತಿಸಲಾಯಿತು.

ದಿನಾಂಕಃ 29.07.1987 ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು

ಹಾಜರುಪಡಿಸುತ್ತಿದ್ದೇನೆ. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮೂಲ ಕ್ರಯಪತ್ರವನ್ನು ಹಾಜರುಪಡಿಸದ ಕಾರಣ ಸಾಕ್ಷಿ ಹಾಜರುಪಡಿಸಿದ ಕ್ರಯಪತ್ರವನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂಬ ತಕರಾರನ್ನು ಮಾಡಿದ್ದು, ಸದರಿ ತಕರಾರಿಗೆ ಒಳಪಟ್ಟು ಸಾಕ್ಷಿ ಹಾಜರುಪಡಿಸಿದ ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ.38 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.